ಕಾಲೋನಿ, ಹಳ್ಳಿಹುಂಡಿ, ಯರಗನಹಳ್ಳಿ ಹಾಗೂ ಹಾರೋಹಳ್ಳಿ(ಜಯಪುರ) ಗ್ರಾಮಗಳ ಕೈಪಂಪು ಕೊಳವೆಬಾವಿಗಳ ಕುಡಿಯುವ ನೀರಿನ ಯೋಜನೆಗಳು ಸಮೀಕ್ಷೆಯಿಂದ: ತನಿಖೆಯಿಂದ ಪ್ರಸ್ತುತ ಅನರ್ಹವೆಂದು ತಿಳಿದುಬಂದಿದೆ.

ಮೇಲ್ಕಂಡ 10 ಗ್ರಾಮಗಳ ಪೈಕಿ 9 ಗ್ರಾಮಗಳಲ್ಲಿ ಈಗಾಗಲೇ ಬದಲಿ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಚಿಕ್ಕಹಳ್ಳಿ ಗ್ರಾಮದಲ್ಲಿಯೂ ಸಹ ಒಂದು ಕೊಳವೆ ಬಾವಿಯನ್ನು ಕೊರೆಯಲು ವ್ಯವಸ್ಥೆ ಮಾಡಲಾಗಿದೆ.

ಮೈಸೂರು ನಗರ ಸಭೆಯ ವ್ಯಾಪ್ತಿಯನ್ನು ವಿಸ್ತರಿಸುವ ಯೋಜನೆ.

2411(*114)

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮೈಸೂರು ನಗರ ಈಗ ಅಗಾಧವಾಗಿ ಬೆಳೆದಿರುವ ಕಾರಣ, ನಗರಸಭೆಯ ವ್ಯಾಪ್ತಿಯನ್ನು ವಿಸ್ತರಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ;

2. ಮೈಸೂರು ನಗರ ಯದ್ವಾತದ್ವ ಬೆಳೆದು ಸಮಸ್ಯೆಗಳು ಸೃಷ್ಟಿ ಆಗುವ ಕೂಡಲೇ ನಗರದ ಸುತ್ತ ಬರುವ ಹೋಬಳಿ ಕೇಂದ್ರಗಳಾದ ಇಲವಾಲ, ಜಯಪುರ, ವರುಣ, ಕಡಕೊಳಗಳಲ್ಲಿ ಸೆಟ್‌ಲೈಟ್ ಟೌನ್(ಉಪನಗರ) ನಿರ್ಮಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ;

3. ಈ ಯೋಜನೆಯನ್ನು ಯಾವಾಗ ಕೈಗೊಳ್ಳಲಾಗುವುದು?

4. ಮೈಸೂರು-ನಂಜನಗೂಡು ನಗರಗಳನ್ನು ಅವಳಿ ನಗರಗಳಾಗಿ ಪರಿವರ್ತಿಸುವ ಸಲಹೆ ಏನಾದರೂ ಸರ್ಕಾರದ ಮುಂದೆ ಇದೆಯೇ;

ಶ್ರೀ ಬಿ.ಬಿ.ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು):

1. ಇಲ್ಲ

2. ಇಲ್ಲ

3. ಉದ್ಭವಿಸುವುದಿಲ್ಲ.

4. ಉದ್ಭವಿಸುವುದಿಲ್ಲ.